ಕರ್ನಾಟಕ ಸರ್ಕಾರ (ಸಿ.ಆರ್.ಪಿ. 67)

| |
|---|
| ಹೇಳಿಕೆ ಹಾಳೆ<br>(ಆರ್.ಪಿ. ಸಂಖ್ಯೆ 57)<br>ನಮೂನೆ ಸಂಖ್ಯೆ 4<br>(ಸಿವಿಲ್) |

ದಿವಾಣಿ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ.ದಂ. ಹಳಿಯಾಳ
ಇವರ ನ್ಯಾಯಾಲಯದಲ್ಲಿ.

ಸಿ.ಸಿ. ನಂಃ 1349/2022

..................................................................

CW 04
PW 02

| | | |
|---|---|---|
| ಹೆಸರು | ಃ | ಬಸವಣ್ಣವ್ವ ಪೊಲೀಸಗೌಡ |
| ತಂದೆಯ ಹೆಸರು | ಃ | ಮಾದೇವ |
| ವಯಸ್ಸು | ಃ | 65 ವರ್ಷ |
| ಉದ್ಯೋಗ | ಃ | ಗೃಹಿಣಿ ಕೆಲಸ |
| ವಾಸಸ್ಥಳ | ಃ | ಕಾಳಗಿನಕೊಪ್ಪ, ತಾಃ ಹಳಿಯಾಳ. |

ದಿನಾಂಕ 13-01-2026 ರಂದು ಸತ್ಯಪ್ರತಿಜ್ಞೆ ಮೇಲೆ ಪ್ರಮಾಣವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ** ಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ :

ನನಗೆ ಚಾಸಾ 1 ರವರು ನನ್ನ ತಾಯಿ. ಚಾಸಾ 2 ಮತ್ತು 3, ಚಾಸಾ 5 ಮತ್ತು 8 ರವರು ಪರಿಚಯ ಇದ್ದಾರೆ. ಚಾಸಾ 6 ಮತ್ತು 7 ಮತ್ತು ಚಾಸಾ 9 ರವರು ಮಕ್ಕಳು. ಆರೋಪಿತರು ಪರಿಚಯ ಇದ್ದಾರೆ.

2 ವರ್ಷಗಳ ಹಿಂದೆ ನನ್ನ ತಾಯಿ ಹೊಲದಲ್ಲಿರುವ ನಮ್ಮ ಮನೆಯ ಒಳಗೆ ಇದ್ದಳು. ನಾನು ಮನೆಯ ಹೊರಗೆ ಇದ್ದೆ. ಆಗ ಆರೋಪಿತರು ನಮ್ಮ ಮನೆಯ ಒಳಗೆ ಯಾರಿಗೂ ಕೇಳದೆ ಹಾಗೆ ಒಳಗೆ ಬಂದು ನನ್ನ ತಾಯಿಗೆ ನಿನ್ನದು ಬಹಳ ಆಗಿದೆ, ಚಿನಾಲಿ ಮಗಳೆ ಅಂತಾ ಹೇಳಿ ಆರೋಪಿ 1 ರವರು ನನ್ನ ತಾಯಿಯ ಕುತ್ತಿಗೆ ಕೈ ಹಾಕಿ ಎಳೆದು ಕಾಲಿನಿಂದ ಒದ್ದರು. ಆಗ ನಾನು ಬಿಡಿಸಲು ಹೋದಾಗ ಆರೋಪಿ 2 ರವರು ನನ್ನ ಕಪಾಳಕ್ಕೆ ಹೊಡೆದ ತಲೆ ಕೂದಲನ್ನು ಹಿಡಿದು ಜಗ್ಗಾಡಿದನು. ಆಗ ಚಾಸಾ 6, 7 ಮತ್ತು 9 ರವರು ಬಂದು ನಮ್ಮನ್ನು ಬಿಡಿಸಿಕೊಂಡರು. ನಂತರ ನಾವು ಆಸ್ಪತ್ರೆಗೆ ಹೋಗಿ ಚಿಕಿತ್ಸೆಯನ್ನು ಪಡೆದು, ನನ್ನ ತಾಯಿ ಪೊಲೀಸ ಠಾಣೆಗೆ ಹೋಗಿ ದೂರನ್ನು ನೀಡಿದಳು. ಈ ವಿಚಾರವಾಗಿ ನಾನು ಹೇಳಿಕೆಯನ್ನು ನೀಡಿದ್ದೇನೆ. ಘಟನೆಯದಾಗ ಸಮಯ ಬೆಳಗ್ಗೆ 10-30 ಆಗಿತ್ತು. ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ. ಅವರು ಈ ದಿನ ಗೈರು ಹಾಜರು ಇದ್ದಿದ್ದರಿಂದ ಅವರ ಗುರುತಿಸುವಿಕೆಯ ಬಗ್ಗೆ ಅವರ ಪರ ವಕೀಲರು ಯಾವುದೇ ತಕರಾರು ಇರುವುದಿಲ್ಲ ಎಂದು ತಿಳಿಸಿರುತ್ತಾರೆ.

**ಪಾಟೀ ಸವಾಲುಃ** ಆರೋಪಿತರ ಪರ ಶ್ರೀಮತಿ ಆರ್ ಎಮ್ ಸಿ ವಕೀಲರಿಂದ.

ನನ್ನನ್ನು ನಮ್ಮ ಊರಿನಲ್ಲಿ ನನ್ನ ಸೋದರ ಮಾವನಿಗೆ ಮದುವೆ ಮಾಡಿ ಕೊಟ್ಟಿದ್ದಾರೆ. ನಮ್ಮ ತಾಯಿಯ ಮನೆ ಮತ್ತು ಆರೋಪಿ 1 ರವರ ಮನೆ ಹೊಲದಲ್ಲಿ ಅಕ್ಕ ಪಕ್ಕ ಇವೆ ಎಂದರೆ ಸರಿಯಲ್ಲ. ಚಾಸಾ 5 ರವರು ನನ್ನ ಮಗಳು. ಚಾಸಾ 2 ರವರು ನನ್ನ ಸಂಬಂಧಿಕ. ಚಾಸಾ 5 ರವರು ಈ ನ್ಯಾಯಾಲಯದಲ್ಲಿ ಎರಡು ದಾವೆಗಳನ್ನು ಹೂಡಿದ್ದಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಸದರಿ ಪ್ರಕರಣಗಳು ದಿನಾಂಕ 14-03-2025 ರಂದು ವಜಾ ಆಗಿರುತ್ತವೆ ಎಂದರೆ ಸಾಕಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಇನ್ನೂ ಎರಡು ಪ್ರಕರಣಗಳು ಇದೇ ನ್ಯಾಯಾಲಯದಲ್ಲಿ ಚಾಲ್ತಿಯಲ್ಲಿ ಇವೆ ಎನ್ನುವುದು ನನಗೆ ಗೊತ್ತಿಲ್ಲ ಎನ್ನುತ್ತಾರೆ. ಚಾಸಾ 7 ರವರು ಆರೋಪಿತರಿಗೆ ಬ್ಲಾಕ್ ನಂಬರ 80 ಹಿಸ್ಸಾ 4 ಅ ರಲ್ಲಿ ಸ್ವಲ್ಪ ಸ್ವಲ್ಪ ಜಾಗವನ್ನು ಮಾರಾಟ ಮಾಡಿದ್ದಾರೆ ಎಂದರೆ ಸಾಕ್ಷಿ ಆ ಜಾಗವನ್ನು ಸಿವಿಲ್ ಪ್ರಕರಣ ಹೂಡಿದರೆ ಮರಳಿ ಪಡೆಯಲು ಆಗುವುದಿಲ್ಲ ಎಂದು ಚಾಸಾ 1 ರವರಿಂದ ಸುಳ್ಳು ದೂರು ಕೊಡಿಸಿದ್ದೀರಿ ಎಂದರೆ ಸರಿಯಲ್ಲ. ಆರೋಪಿತರು ಗುಂಡೋಳ್ಳಿ ಗ್ರಾಮ ಪಂಚಾಯತಿಯಿಂದ ಅನುಮತಿ ಪಡೆದು ಬ್ಲಾಕ್ ನಂಬರ 80 ಹಿಸ್ಸಾ 4 ಅ ರಲ್ಲಿ ಮನೆ ಕಟ್ಟಿಕೊಂಡಿದ್ದಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಚಾಸಾ 1 ರವರು ವಾಸವಾಗಿರುವ ಮನೆಯ ಬ್ಲಾಕ್ ನಂಬರ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಆ ಭೂಮಿಗೆ ಜಾಸ್ತಿ ಕಿಮ್ಮತ್ತು ಇದೆ ಎಂದು ಆ ಒಟ್ಟು ಹಣ ಕೊಡುವುದಿಲ್ಲ ಎಂದು ಆರೋಪಿತರ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿದ್ದೀರಿ ಎಂದರೆ ಸರಿಯಲ್ಲ. ನನ್ನ ತಾಯಿಗೆ ಈಗ 80 ವರ್ಷ. ಆಕೆ ಜಾರಿ ಬಿದ್ದಿದ್ದನ್ನು ನೆಪ ಮಾಡಿಕೊಂಡು ಸುಳ್ಳು ಪ್ರಕರಣ ದಾಖಲಿಸಿದ್ದೀರಿ ಎಂದರೆ ಸರಿಯಲ್ಲ. ನೀವು ಯಾವುದೇ ಹೇಳಿಕೆಯನ್ನು ನೀಡಿಲ್ಲ ಎಂದರೆ ಸರಿಯಲ್ಲ. ಈ ಪ್ರಕರಣದ ಎಲ್ಲ ಸಾಕ್ಷಿದಾರರು ನಿಮ್ಮ ಸಂಬಂಧಿಕರೆ ಎಂದರೆ ಸಾಕ್ಷಿ ಕೆಲವೊಬ್ಬರು ಸಂಬಂಧಿಕರು ಇದ್ದಾರೆ ಎನ್ನುತ್ತಾರೆ. ಚಾಸಾ 1 ರವರು ಕೊಟ್ಟ ದೂರಿಗೆ ಅನುಕೂಲ ಆಗಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದಿರಿ ಎಂದರೆ ಸರಿಯಲ್ಲ. ಯಾವುದೇ ಘಟನೆ ನಡೆದಿಲ್ಲ ಎಂದರೆ ಸರಿಯಲ್ಲ. ಘಟನೆಯು 2 ವರ್ಷಗಳ ಹಿಂದೆ ನಡೆದಿರುತ್ತದೆ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದ ಮೇಲೆ ಗಣಕೀಕರಿಸಿದೆ)

ಓ.ಹೇ.ಕೇ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಹಾಗೂ
ಪ್ರ.ದ.ನ್ಯಾ.ದಂ., ಹಳಿಯಾಳ.